# ಕ.ರಾ.ರ.ಸಾ.ನಿಗಮ. ತುಮಕೂರು ವಿಭಾಗ: ತುಮಕೂರು

ಸಂ:ಕರಾಸಾ/ತುವಿ/ಸಂ/ವಾ&ಕಾರ್ಮಿಕ/ಇ–ಟೆಂ/748/2018–19 ದಿನಾಂಕ:–15–02–2019

## ಇ–ಟೆಂಡರ್ ಪ್ರಕಟಣೆ ಸಂಖ್ಯೆ–01/2018–19

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, **ತುಮಕೂರು** ವಿಭಾಗದ ವ್ಯಾಪ್ತಿಗೆ ಸೇರಿದ ತುಮಕೂರು ಘಟಕ ಮತ್ತು ವಿಭಾಗೀಯ ಕಾರ್ಯಾಗಾರದಲ್ಲಿರುವ ನಿಗಮದ ಸಿಬ್ಬಂದಿಗಳಿಗೆ ಕಾಫಿ, ಟೀ, ತಿಂಡಿ, ಊಟ, ಉಪಹಾರಗಳನ್ನು ಸಾಧ್ಯವಾದಷ್ಟು ರಿಯಾಯಿತಿ ದರದಲ್ಲಿ ವಿತರಿಸುವ ಸಲುವಾಗಿ ನಿರ್ಮಿಸಿರುವ ಉಪಹಾರ ಗೃಹಕ್ಕೆ ಪರವಾನಿಗೆದಾರರನ್ನು 02 ವರ್ಷಗಳ ಅವಧಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಸದರಿ ಪ್ರಕ್ರಿಯೆಯಲ್ಲಿ ಕಾಫಿ, ಟೀ, ತಿಂಡಿ, ಊಟ, ಉಪಹಾರಗಳ ಒಟ್ಟಾರೆ ಕಡಿಮೆ ಮೊತ್ತ ನಮೂದಿಸಿದವರಿಗೆ ಆಯ್ಕೆಮಾಡಲು ಅಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಘಟಕದ ಹೆಸರು | ವಾಣಿಜ್ಯ ಮಳಿಗೆ | ವಿಸ್ತೀರ್ಣ ಚದರಡಿ | ಪರವಾನಿಗೆ ಅವಧಿ | ಪರವಾನಿಗೆ ಶುಲ್ಕ | ಭದ್ರತಾ ಠೇವಣಿ |
|---|---|---|---|---|---|---|
| 1 | ತುಮಕೂರು ಘಟಕ–1 | ಉಪಹಾರ ಗೃಹ | 232.00 | 2 ವರ್ಷ | ಉಚಿತ | ರೂ. 50,000/– |
| 2 | ವಿಭಾಗೀಯ ಕಾರ್ಯಗಾರ, ತುಮಕೂರು | ಉಪಹಾರ ಗೃಹ | 485.00 | 2 ವರ್ಷ | ಉಚಿತ | ರೂ. 50,000/– |

ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿರುವ ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ:–09–03–2019 ರಂದು 17.00 ಗಂಟೆಯೊಳಗೆ ಅರ್ಜಿ ಸಲ್ಲಿಸುವುದು ಹಾಗೂ ಸದರಿ ಟೆಂಡರ್‌ನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿನ ಪ್ರಕಾರ ದಿನಾಂಕ:–11–03–2019 ರಂದು ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ ಮಾತ್ರ)

(ಚೆಕ್‌ಬಂದಿ ಹಾಗೂ ಹೆಚ್ಚಿನ ವಿವರವನ್ನು ವಿಭಾಗೀಯ ಕಛೇರಿ, ಸಂಚಾರ/ಕಾರ್ಮಿಕ ಶಾಖೆಯಲ್ಲಿ ಅಥವಾ **www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳುವುದು.)**

**Last date for submitting application: As per e-procurement portal.**
**Online auction on: As per e-procurement portal.**
**Tender will be opened on: As per e-procurement portal.**

**ಷರತ್ತು ಮತ್ತು ನಿಬಂಧನೆಗಳು:–**

1. ಉಪಹಾರ ಗೃಹ ಯಾವ ಸ್ಥಿತಿಯಲ್ಲಿವೆಯೋ ಹಾಗೇಯೇ ನೀಡಲಾಗುವುದು.
2. ನಿಗಮದ ಕಾರ್ಮಿಕ ಸಿಬ್ಬಂದಿಗಳಿಗೆ ಸಾಧ್ಯವಾದಷ್ಟು ರಿಯಾಯಿತಿ ದರದಲ್ಲಿ ರುಚಿ–ಶುಚಿಯಾದ ಕಾಫಿ, ಟೀ, ಫಲಹಾರ ಹಾಗೂ ಊಟವನ್ನು ನೀಡುವ ಆಸಕ್ತ ವಾಣಿಜ್ಯ ಉದ್ಯಮಿದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.
3. ತಾವು ಉಪಹಾರ ಗೃಹದಲ್ಲಿ ನೀಡಲು ಉದ್ದೇಶಿಸಿರುವ ಕಾಫಿ, ಟೀ, ತಿಂಡಿ, ಊಟ, ಇತ್ಯಾದಿ ಐಟಂಗಳ ದರಗಳನ್ನು ಸ್ಪಷ್ಟವಾಗಿ ನಮೂದಿಸುವುದು ಹಾಗೂ ತಾವು ಎಲ್ಲಾ ಐಟಂಗಳು ಸೇರಿ ನಮೂದಿಸಿರುವ ಒಟ್ಟು ಮೊತ್ತವನ್ನು ಆಧಾರವಾಗಿಟ್ಟುಕೊಂಡು ಒಟ್ಟಾರೆಯಾಗಿ ಕಡಿಮೆ ಮೊತ್ತ ನಮೂದಿಸಿದವರಿಗೆ ಉಪಹಾರ ಗೃಹಗಳನ್ನು ನೀಡಲಾಗುವುದು.
4. ಉಪಹಾರ ಗೃಹದ ಕರಾರು ಒಪ್ಪಂದದ ಅವಧಿಯು 2 ವರ್ಷಗಳು ಮಾತ್ರ,
5. ಜಿಲ್ಲಾ ಕೇಂದ್ರ ಸ್ಥಾನದ ಉಪಹಾರ ಗೃಹಕ್ಕೆ ಭದ್ರತಾ ಠೇವಣಿ ರೂ.50,000/–, ಡಿ.ಡಿ. ರೂಪದಲ್ಲಿ "**ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ತುಮಕೂರು ವಿಭಾಗ**" ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಸಲ್ಲಿಸುವುದು.
6. ಉಪಹಾರಗೃಹದಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ.
7. ಟೆಂಡರ್ ಅರ್ಜಿಯೊಂದಿಗೆ ಅಡಕಗೊಳಿಸಿರುವ ANNEXURE-A ನಲ್ಲಿ ಉಪಹಾರ ಗೃಹದಲ್ಲಿ/ ನೀಡಲು ಉದ್ದೇಶಿಸಿರುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿ ಐಟಂಗಳ ಪ್ರಮಾಣವನ್ನು ದರದೊಂದಿಗೆ ಟೆಂಡರ್‌ನಲ್ಲಿ ಸ್ಪಷ್ಟವಾಗಿ ನಮೂದಿಸುವುದು.
8. ಉಪಹಾರ ಗೃಹಕ್ಕೆ ಘಟಕದ ಆವರಣದಲ್ಲಿರುವ ನೀರಿನ ಲಭ್ಯತೆಗೆ ಅನುಗುಣವಾಗಿ ನೀರನ್ನು ಉಚಿತವಾಗಿ ನೀಡಲಾಗುವುದು, ನೀರಿನ ಸಮಸ್ಯೆ ಉದ್ಭವಿಸಿದಲ್ಲಿ ಗುತ್ತಿಗೆದಾರರು ಅವರ ಸ್ವಂತ ವೆಚ್ಚದಲ್ಲೇ ಹೊರಗಿನಿಂದ ನೀರು ತರಿಸಿಕೊಳ್ಳುವುದು.
9. ಉಪಹಾರ ಗೃಹ ಮಳಿಗೆಗೆ ಉಪಯೋಗಿಸಿಕೊಂಡಿರುವ ವಿದ್ಯುತ್ ಬಿಲ್‌ನ್ನು ಗುತ್ತಿಗೆದಾರರೇ ಪಾವತಿಸುವುದು.
10. ಗುತ್ತಿಗೆದಾರರು ನೀಡುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿಗಳ ಗುಣಮಟ್ಟ, ಪ್ರಮಾಣ ಅಥವಾ ಶುಚಿತ್ವದ ವಿಚಾರದಲ್ಲಿ ಯಾವುದೇ ಲೋಪದೋಷ ಕಂಡುಬಂದಲ್ಲಿ ಅಥವಾ ಗುತ್ತಿಗೆದಾರರು ಉಪಹಾರ ಗೃಹವನ್ನು ಸ್ವತ: ನಡೆಸದೇ ಬೇರೆ ಯಾರಿಗಾದರೂ ಪರಭಾರೆ (Sublet) ಮಾಡಿರುವುದು, ಒಳಬಾಡಿಗೆಗೆ ನೀಡಿರುವುದು ಕಂಡು ಬಂದಲ್ಲಿ ಅಥವಾ ಇನ್ನಿತರೆ ಯಾವುದೇ ಅನ್ಯ/ಕಾನೂನು ಬಾಹಿರ ಚಟುವಟಿಕೆಗಳ ಸುಳಿವು/ದೂರುಗಳು ಬಂದಲ್ಲಿ ಒಂದು ವಾರದ ನೋಟಿಸ್ ಜಾರಿ ಮಾಡಿ ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.
11. ಗುತ್ತಿಗೆದಾರರು ನೀಡುವ ಊಟ, ತಿಂಡಿ, ಕಾಫಿ, ಟೀ ಇತ್ಯಾದಿಗಳ ಗುಣಮಟ್ಟ, ಪ್ರಮಾಣ ಮತ್ತು ಗುಣಮಟ್ಟವನ್ನು ಹಾಗೂ

ಶುಚಿತ್ವವನ್ನು ತಪ್ಪದೇ ಕಾಯ್ದುಕೊಳ್ಳುವುದು. ತಪ್ಪಿದ್ದಲ್ಲಿ ಈ ಸಂಬಂಧ ನಿಗಮದ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಿ, ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.

12. ಮಳಿಗೆಗಳಲ್ಲಿ ಟೂರಿಸ್ಟ್ ಟ್ರಾವಲ್, ಮದ್ಯಪಾನ, ಮಾಂಸ ಮತ್ತು ಇತರೆ ಕಾನೂನು ಬಾಹಿರ ಚಟುವಟಿಕೆಗಳಿರುವ ವ್ಯಾಪಾರ, ಮಾದಕ ವಸ್ತುಗಳು, ವಾಯು ಮಾಲಿನ್ಯ ಉಂಟುಮಾಡುವ ಹಾಗೂ ಸಂಸ್ಥೆಯ ಹಿತಕ್ಕೆ ಧಕ್ಕೆಯಾಗುವಂತಹ ವ್ಯಾಪಾರಗಳನ್ನು ಹೊರತು ಪಡಿಸಿದೆ.
13. ಉಪಹಾರ ಗೃಹದಲ್ಲಿ ನಿಯೋಜಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆಯನ್ವಯ ಕನಿಷ್ಠ ವೇತನ ನೀಡುವುದು ಹಾಗೂ ಕಾರ್ಮಿಕ ಕಾಯಿದೆನ್ವಯ ಪಿ.ಎಫ್, ಇಎಸ್ಐ ಇತರೆ ಸವಲತ್ತುಗಳನ್ನು ನೀಡುವ ಜವಾಬ್ದಾರಿಯನ್ನು ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು.
14. ಘಟಕದಲ್ಲಿರುವ ಉಪಹಾರ ಗೃಹವು ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದಲ್ಲಿ ಅಪಘಾತಗಳು, ಇತರೆ ಅನಾಹುತಗಳು ನಡೆಯದಂತೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವುದು. ಅನಾಹುತಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆ.
15. ಘಟಕದ ಉಪಹಾರ ಗೃಹದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ.
16. ಘಟಕದ ಉಪಹಾರ ಗೃಹ ಸಿಗರೇಟು/ಗುಟ್ಕಾ ಮತ್ತು ಇನ್ನಿತರೆ ತಂಬಾಕು ಪದಾರ್ಥಗಳ ಮಾರಾಟವನ್ನು ಕಡ್ಡಾಯವಾಗಿ ನಿಷೇಧಿಸಿದೆ.
17. ಉಪಹಾರ ಗೃಹದಲ್ಲಿ LPG ಗ್ಯಾಸ್/ವಿದ್ಯುತ್‌ನ್ನು ಮಾತ್ರ ಬಳಸುವುದು. (ಸೌದೆ/ಹೊಟ್ಟು ಇತ್ಯಾದಿಗಳನ್ನು ಬಳಸಿ ಒಲೆಯನ್ನು ಉರಿಸುವಂತಿಲ್ಲ).
18. ಬೆಂಕಿ ನಂದಿಸುವ ಉಪಕರಣಗಳನ್ನು ಸ್ವಂತ ಖರ್ಚಿನಲ್ಲಿ ಜೋಡಿಸಿಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿರಬೇಕು.
19. ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
20. ಆಯ್ಕೆಗೊಂಡ ಗುತ್ತಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಭದ್ರತಾ ಠೇವಣಿಯನ್ನು ಹಿಂತಿರುಗಿಸಲಾಗುವುದು.
21. ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಉಪಹಾರ ಗೃಹದ ಮೂಲ ಕಟ್ಟಡಕ್ಕೆ ಹಾನಿಯಾಗದಂತೆ ನೋಡಿಕೊಳ್ಳುವುದು/ಯಾಥಾಸ್ಥಿತಿಯನ್ನು ಕಾಪಾಡುವುದು, ಉಳಿದಂತೆ ಯಾವುದೇ ದುರಸ್ಥಿ ಕಾರ್ಯ, ವಿದ್ಯುತ್‌ಚ್ಛಕ್ತಿ ಬಿಲ್ ಪಾವತಿ ಬಾಕಿ ಅಥವಾ ಇನ್ನಿತರೆ ಯಾವುದೇ ಕಾನೂನು ಬದ್ಧಬಾಕಿ ಇದ್ದಲ್ಲಿ ಭದ್ರತಾ ಠೇವಣಿಯಲ್ಲಿ ಜಮಾಮಾಡಿಕೊಳ್ಳಲಾಗುವುದು.
22. ಗುತ್ತಿಗೆದಾರರು ನಿಗಮಕ್ಕೆ ಯಾವುದೇ ಷರತ್ತುಗಳನ್ನು ಹಾಕುವಂತಿಲ್ಲ, ಸಂಸ್ಥೆಯು ಕಾಲಕಾಲಕ್ಕೆ ವಿಧಿಸುವ ಎಲ್ಲ ಷರತ್ತುಗಳನ್ನು ಒಪ್ಪಿಕೊಳ್ಳತಕ್ಕದಾಗಿರುತ್ತದೆ.
23. ಹೆಚ್ಚುವರಿ ಸ್ಥಳವನ್ನು ತೆರವುಗೊಳಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಅಥವಾ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಒಪ್ಪಂದವನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು.
24. ಕಾಮಗಾರಿಗಾಗಿ ಮಳಿಗೆ ಅವಶ್ಯಕತೆ ಇದ್ದಾಗ ನಿಗಮದ ವತಿಯಿಂದ 1 ತಿಂಗಳು ಮುಂಚಿತವಾಗಿ ನೋಟಿಸ್ ನೀಡಿ ತೆರವುಗೊಳಿಸಲಾಗುವುದು.
25. ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುಂದೂಡುವ & ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/–

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ. ತುಮಕೂರು ವಿಭಾಗ.

The following food stuffs/beverages which are to be prepared and served to the employees at the rates and weight offered by the licensee are shown below.

**ANNEXURE-A**

| SL. NO | ITEMS | WEIGHT IN GMS/ML | OFFERED RATE (RS) |
|---|---|---|---|
| 1 | Idli-2 | 200 gms | |
| 2 | Rava Idli-1 | 250 gms | |
| 3 | Rice Sambar | 300 gms | |
| 4 | Rice Bath | 300 gms | |
| 5 | Chitranna | 300 gms | |
| 6 | Vangibath | 300 gms | |
| 7 | Kesribath | 150 gms | |
| 8 | Karabath | 150 gms | |
| 9 | Pongal | 300 gms | |
| 10 | Veg Palav | 300 gms | |
| 11 | Puliyogare | 300 gms | |
| 12 | Curd Rice | 300 gms | |
| 13 | Bisibelebath | 300 gms | |
| 14 | Ragi mudde-1 | 200 gms | |
| 15 | Chapati-1, Chatni, Sagu | 250 gms | |
| 16 | Puri-2, Chatni, Sagu | 200 gms | |
| 17 | Uddinvada | 75 gms | |
| 18 | Pakoda-2 | 150 gms | |
| 19 | Mangalore Bajji-2 | 150 gms | |
| 20 | Masalvade | 100 gms | |
| 21 | Bonda | 75 gms | |
| 22 | Maddur Vada | 100 gms | |
| 23 | Coffee | 120 ml | |
| 24 | Special Coffee | 120 ml | |
| 25 | Tea | 120 ml | |
| 26 | Milk | 120 ml | |
| 27 | Badam Milk | 120 ml | |
| 28 | Butter Milk | 120 ml | |
| 29 | Horlicks | 120 gms | |
| 30 | Plate Meals (300 gms Rice, 1 Chapati/ 2Puri/1 Ragi mudde/ Palya, Rasam, Sambar) | | |
| 31 | Rava Vada-1 | 100 gms | |
| 32 | Set Dosa | 250 gms | |
| 33 | Masala Dosa | 200 gms | |
| 34 | Onion Dosa | 200 gms | |
| 35 | Roti (single)+Curry | 200 gms | |
| | Total Amount | | |

ಅರ್ಜಿದಾರರ ಸಹಿ/–

ಗೆ,
ಕಾರ್ಮಿಕ ಕಲ್ಯಾಣಾಧಿಕಾರಿ
ತುಮಕೂರು ವಿಭಾಗ. ತುಮಕೂರು.

1) ಉಪಹಾರಗೃಹಗಳು ಯಾವ ಯಾವ ಘಟಕ ಮತ್ತು ಕಾರ್ಯಗಾರಗಳಲ್ಲಿವೆ ಎಂಬ ಸಂಪೂರ್ಣ ವಿವರ ನೀಡುವುದು.
2) ಉಪಹಾರಗೃಹಗಳ ವಿಸ್ತೀರ್ಣ ಮತ್ತು ಸ.ಕಾ.ನಿ.ಅಭಿಯಂತರರಿಂದ ದೃಢೀಕರಿಸಿದ ನಕ್ಷೆ, ಚೆಕ್‌ಬಂದಿ ಮತ್ತು ವಿದ್ಯುತ್ ಪ್ರತ್ಯೇಕ ಅಳವಡಿಕೆ ಹಾಗೂ ಮೀಟರ್ ಸಂಖ್ಯೆ ದಾಖಲಾತಿಗಳನ್ನು ತಾವು ದೃಢೀಕರಿಸಿ ನೀಡುವುದು.
3) ಉಪಹಾರಗೃಹ ಇನ್ನು ಹೆಚ್ಚುವರಿಯಾಗಿ ನಮೂದಿಸಬೇಕಾಗಿರುವ ಷರತ್ತು ಮತ್ತು ನಿಬಂಧನೆಗಳನ್ನು ದೃಢೀಕರಿಸಿ ನೀಡುವುದು.
4) ಮೇಲಿನ ಎಲ್ಲಾ ದಾಖಲಾತಿಗಳನ್ನು ದೃಢೀಕರಿಸಿ ಮತ್ತು ಟೆಂಡರ್ ಪ್ರಕಟಣೆಯನ್ನು ಸೂಕ್ತಧಿಕಾರಿಗಳಿಂದ ಅನುಮೋದನೆ ಪಡೆದು ನೀಡುವುದು.